# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 226 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | : | 06/03/2025 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ. ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅಂಗವಿಕಲರ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಅನುದಾ ಎಷ್ಟು: (ಸಂಬಳ, ಸಾರಿಗೆ ಮತ್ತು ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ವಿಷಯಗಳ ಪ್ರತ್ಯೇಕವಾಗಿ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)</td><td>ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ಇಲಾಖೆಯಿಂದ ಒಟ್ಟು ರೂ.73090.09 ಲಕ್ಷಗಳ ಆಯವ್ಯಯ ಬಿಡುಗಡೆಯಾಗಿದ್ದು, ಬಿಡುಗಡೆಯಾದ ಅನುದಾನ ವಿವರ ಈ ಕೆಳಕಂಡಂತಿದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಸಂಬಳ</th><th>ಸಾರಿಗೆ</th><th>ಕಾರ್ಯ ಕ್ರಮಗಳು</th><th>ಒಟ್ಟು</th></tr>
<tr><td>2021-22</td><td>1379.66</td><td>115.00</td><td>16245.28</td><td>17739.94</td></tr>
<tr><td>2022-23</td><td>1546.20</td><td>123.00</td><td>23719.48</td><td>25388.68</td></tr>
<tr><td>2023-24</td><td>1556.83</td><td>142.00</td><td>28262.64</td><td>29961.47</td></tr>
<tr><td>ಒಟ್ಟು</td><td>4486.69</td><td>380.00</td><td>68227.40</td><td>73090.09</td></tr>
</table></td></tr>
<tr><td>ಆ)</td><td>ಪ್ರಸ್ತುತ ಸಾಲಿನಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆಗೆ ಹಂಚಿಕೆ ಮಾಡಿ ಬಿಡುಗಡೆ ಮಾಡಲಾದ ಅನುದಾನ ಎಷ್ಟು: ಕಳೆದ ಮೂರು ವರ್ಷಗಳಿಗಿಂತ ಈ ವರ್ಷ ಕಡಿಮೆ ಹಣ ಬಿಡುಗಡೆ ಮಾಡಲು ಕಾರಣವೇನು: (ಮಾಹಿತಿ ಒದಗಿಸುವುದು)</td><td>ಪ್ರಸಕ್ತ ಸಾಲಿನಲ್ಲಿ ರೂ.25073.68 ಲಕ್ಷಗಳ ಆಯವ್ಯಯ ಹಂಚಿಕೆ ಮಾಡಲಾಗಿದ್ದು, ರೂ.2423.65 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಫೆಬ್ರುವರಿ ಮಾಹೆಯ ಅಂತ್ಯಕ್ಕೆ ರೂ.19334.48 ಲಕ್ಷಗಳ ಆಯವ್ಯಯ ವೆಚ್ಚವಾಗಿರುತ್ತದೆ.<br><br>ಇಲಾಖೆಗೆ ಪ್ರಸ್ತಕ ಸಾಲಿನಲ್ಲಿ ಕೊರತೆಯಾಗಿರುವ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿರುತ್ತದೆ.</td></tr>
<tr><td>ಇ)</td><td>ಈ ಆರ್ಥಿಕ ವರ್ಷದಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ಅಥವಾ ಪೂರ್ಣ ಪ್ರಮಾಣದ ಅನುದಾನಕ್ಕೆ ಪತ್ರ ವ್ಯವಹಾರವನ್ನು ನಡೆಸಲಾಗಿದೆಯೇ: ಇದ್ದಲ್ಲಿ, ಅವರ ಕೋರಿಕೆಯ ಪತ್ರ ಮತ್ತು ಬಿಡುಗಡೆಯಾದ ಅನುದಾನದ ವಿವರಗಳನ್ನು ಒದಗಿಸುವುದು:</td><td>ಆರ್ಥಿಕ ವರ್ಷದಲ್ಲಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಹೆಚ್ಚುವರಿ ಆಯವ್ಯಯವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯಿಂದ ಪೂರಕ ಅಂದಾಜು-2 ರಲ್ಲಿ ಹೆಚ್ಚುವರಿಯಾಗಿ ರೂ.300.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. (ಆರ್ಥಿಕ ಇಲಾಖೆಯಿಂದ ಬಿಡುಗಡೆಯಾದ ಹೆಚ್ಚುವರಿ ಆಯವ್ಯಯ ಪತ್ರವನ್ನು ಅನುಬಂಧದಲ್ಲಿ ಲಗತ್ತಿಸಿದೆ).</td></tr>
<tr><td>ಈ)</td><td>ಅಂಗವಿಕಲರ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಘ, ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು 26 ಕೋಟಿಗಳ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿರುವುದು ನಿಜವೇ: ಹಾಗಿದ್ದಲ್ಲಿ, ಈ ಹಣವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆ ಮಾಡಲಾಗುವುದು: (ಮಾಹಿತಿ ಒದಗಿಸುವುದು)</td><td rowspan="2">ಇಲಾಖೆಯಲ್ಲಿ ಮುಂದುವರಿಂದ ಯೋಜನೆಗಳಾದ ಶಿಶುಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಕೊರತೆಯಾಗಿರುವ ರೂ.23.41 ಕೋಟಿಗಳ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನ ಒದಗಿಸಿದ ನಂತರದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.</td></tr>
<tr><td>ಉ)</td><td>ಅಂಗವಿಕಲರ ಕಲ್ಯಾಣ ಇಲಾಖೆಗೆ ಬೇಕಾಗುವ ಪೂರ್ಣ ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮವಹಿಸುವುದೆ?</td></tr>
</table>

**ಸಂಖ್ಯೆ:ಮಮಇ 79 ಪಿಹೆಚ್‌ಪಿ 2025**

(ಲಕ್ಷ್ಮೀ ಆರ್, ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು

I/7464 2024

ಕರ್ನಾಟಕ ಸರ್ಕಾರ

ಆಇ 303 ವೆಚ್ಚ-10 2024

ಕರ್ನಾಟಕ ಸರ್ಕಾರದ ಸಚಿವಾಲಯ,

ವಿಧಾನಸೌಧ,

ಬೆಂಗಳೂರು, ದಿನಾಂಕ:02-12-2024

## ಅನಧಿಕೃತ ಟಿಪ್ಪಣಿ

**ವಿಷಯ:** ವಿಕಲಚೇತನರ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಸಾಧನ ಸಲಕರಣೆ ಯೋಜನೆಯಡಿ ಹೆಚ್ಚುವರಿ ಅನುದಾನವನ್ನು ಒದಗಿಸುವ ಬಗ್ಗೆ

**ಉಲ್ಲೇಖ:** ಇಲಾಖೆಯ ಕಡತ ಸಂಖ್ಯೆ: DEDASC/PLAN/PSEC/2/2024

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಕಡತದಲ್ಲಿ ಕೋರಿರುವಂತೆ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ Aids and Appliances for the Disabled ಲೆಕ್ಕಶೀರ್ಷಿಕೆ: 2235-02-101-052ರಡಿ ಟಾಕಿಂಗ್ ಲ್ಯಾಪ್ ಟಾಪ್ ಗೆ ರೂ. 270.00 ಲಕ್ಷಗಳು ಹಾಗೂ ಬ್ರೈಲ್ ಕಿಟ್ ಗೆ ರೂ. 30.00 ಲಕ್ಷಗಳು ಒಟ್ಟಾರೆ ರೂ. 300.00 ಲಕ್ಷಗಳನ್ನು ಪೂರಕ ಅಂದಾಜು-2 ರಲ್ಲಿ ಹೆಚ್ಚುವರಿಯಾಗಿ ಒದಗಿಸಲು ಕ್ರಮವಹಿಸಲಾಗುವುದು ಎಂದು ಆಡಳಿತ ಇಲಾಖೆಗೆ ತಿಳಿಸಿದೆ.

*(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,*

*ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ)*

**Signed by Lalitha H R**
**Date: 02-12-2024 19:47:21**
**Reason: Approved**

(ಹೆಚ್.ಆರ್. ಲಲಿತ)

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ವೆಚ್ಚ 2 &10)

**ಇವರಿಗೆ:**

ಸರ್ಕಾರದ ಕಾರ್ಯದರ್ಶಿಗಳು,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ

ವಿಕಲಚೇತನರ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ